ದಿನಾಂಕಃ **23.10.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್.ಎಸ್.ಕೆ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

1 ನೇ ಪ್ರತಿವಾದಿ ಸಾಲ ಪಡೆಯಲು ನೀಡಿದಂತಹ ಸಾಲದ ಅರ್ಜಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**1** ಎಂದು ಗುರುತಿಸಲಾಯಿತು. ದಿಃ29.07.2016 ರ ಕರಾರಿನ ನಿಬಂಧನೆಗಳನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**2** ಎಂದು ಗುರುತಿಸಲಾಯಿತು. ದಿಃ29.07.2016 ರ ಅಡಮಾನ ಪತ್ರದ ಕರಾರನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**3** ಎಂದು ಗುರುತಿಸಲಾಯಿತು. ದಿಃ 27.07.2016 ರ ಅಡಮಾನ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**4** ಎಂದು ಗುರುತಿಸಲಾಯಿತು. ಮಂಡದಿಮ್ಮನಹಳ್ಳಿ ಗ್ರಾಮದ ಸರ್ವೆ ನಂ. 30/4 ಕ್ಕೆ ಸಂಬಂಧಿಸಿದ ಎರಡು ಪಹಣಿಗಳನ್ನು ಮತ್ತು ಒಂದು ಮ್ಯುಟೇಷನ್‌ನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**5** ರಿಂದ **7** ಎಂದು ಗುರುತಿಸಲಾಯಿತು. ದಿಃ07.01.2025 ರ ನೋಟೀಸಿನ ಕಛೇರಿ ಪ್ರತಿಯನ್ನು, 5 ಅಂಚೆ ರಶೀದಿಗಳೊಂದಿಗೆ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**8** ರಿಂದ **13** ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯ ಖಾತೆಗೆ ಸಂಬಂಧಿಸಿದ ವಹಿವಾಟಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**14** ಎಂದು ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ